

"ಹೀಗೆ ಸೋಂಬೇರಿ ತರ ಮಲಗಿದ್ರೆ ನಿನ್ನ ಎಬ್ಬಿಸಿಬಿಡ್ತೀನಿ ನೋಡು" ಎಂದು ದ್ವಂದ್ವಾರ್ಥದ ಡೈಲಾಗುಗಳನ್ನು ಎಸೆಯುತ್ತಿರುತ್ತಾಳೆ. ಆದ್ದರಿಂದ ನಾನೂ ಬೇಗನೇ ಎದ್ದು, ಶಿಸ್ತಾಗಿ ಹಲ್ಲುಜ್ಜಿ ಬರುವ ಹೊತ್ತಿಗೆ, "ಆವೋ ಹುಜೂರ್, ತುಮ್ ಕೋ ಸಿತಾರೋಂ ಮೇ ಲೇ ಚೆಲೂಂ" ಎನ್ನುತ್ತಾ ಕಾಫಿ ಮಗ್ಗನ್ನು ಬದಿಗಿಟ್ಟು, "ಹೇಳಿ ಹುಜೂರ್, ಆಜ್ ಆಪ್ ಕೋ ಕಹಾ ಕಹಾ ಲೇ ಚೆಲೂಂ" ಎನ್ನುತ್ತಿದ್ದಾಗಲೇ ನಿಶ್ಚಲ ಕೊಳದಲ್ಲಿ ಕಲ್ಲು ಎಸೆದಂತೆ ಫೋನು ರಿಂಗಣಿಸಿತು.

ನಮ್ಮ ಅತ್ತೆ.

'ನನಗೆ ನೀಯೇನೂ ಮದುವೀ ಗಿದುವೀ ಅಂತ ಸಂಬಂಧ ಹುಡುಕಬೇಡ ಅತ್ತಿ' ಎಂದು ತುಂಬಾ ಕೋಪದಿಂದ, ನಿರಾಕಾರ ಭಾವದಿಂದ ಹೇಳಿದರೂ ಅತ್ತೆ ಸುಮ್ಮನಿರುವುದಿಲ್ಲ.

"ಸಾಮರ್ಲಕೋಟದ ಸಂತೋಷ್ ಎಂಬ ಹುಡುಗನ ಅಪ್ಪಅಮ್ಮಂಗೆ ನಿನ್ನ ಪ್ರೊಫೈಲ್ ತುಂಬಾ ಇಷ್ಟವಾಯಿತಂತೆ. ಅವರ ಜೊತೆ ಮಾತಾಡಿದೀನಿ. ಆ ಹುಡಗನಿಗೂ ಓಕೆಯಂತೆ. ಗುರುವಾರ ಅವರನ್ನ ಕರಕೊಂಡು ನಿನ್ನ ಹತ್ರ ಬರತೀನಿ. ರಜಾ ಹಾಕಿರು" ಎಂದು ಹುಕುಂ ಜಾರೀ ಮಾಡಿದಳು.